ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1 ರಿಂದ 4ನೇ ಪ್ರತಿವಾದಿ ಪರ ಶ್ರೀ ಬಿ.ಎನ್. ವಕೀಲರಿಂದಃ-

ನಮ್ಮ ತಂದೆಯವರು ಯಾವಾಗ ಸರ್ಕಾರಿ ಕೆಲಸಕ್ಕೆ ಸೇರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಮ್ಮ ತಂದೆ ಎಲ್ಲಿ ಎಲ್ಲಿ ಕೆಲಸ ಮಾಡಿರುತ್ತಾರೆ ಎಂದು ತಿಳಿದಿರುತ್ತದೆ. ನಮ್ಮ ತಂದೆಯವರು ಬೆಂಗಳೂರು ಮತ್ತು ದೊಡ್ಡಬಳ್ಳಾಪುರದಲ್ಲಿ ಕೆಲಸ ಮಾಡಿರುತ್ತಾರೆ. ನಾನು ದೊಡ್ಡಬಳ್ಳಾಪುರದಲ್ಲಿ 1973 ರಲ್ಲಿ ಜನಿಸಿರುತ್ತೇನೆ. ನನ್ನ ತಂದೆಯವರು ಸರ್ಕಾರಿ ಕೆಲಸಕ್ಕೆ ಸೇರಿಕೊಂಡಾಗ ಎಷ್ಟು ವರ್ಷ ವಯಸ್ಸಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ.

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಹಬ್ಬ ಹರಿದಿನಗಳಲ್ಲಿ ಬಸವೇಶ್ವರ ದೇವಸ್ಥಾನದಲ್ಲಿ ಪೂಜಾ ಕಾರ್ಯಗಳಿಗೆ ನಮ್ಮ ತಂದೆಯವರು ಹಣಕಾಸಿನ ಸಹಾಯ ಮಾಡುತ್ತಿದ್ದರು. ಆ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ. ನಾನು ಮತ್ತು ನಮ್ಮ ತಂದೆಯವರು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುವ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ನಮ್ಮ ತಂದೆ ಸರ್ಕಾರಿ ಕೆಲಸಕ್ಕೆ ಸೇರಿದ ನಂತರ ಬಾನಂದೂರು ಮತ್ತು ಇಟ್ಟಮಡು ಗ್ರಾಮದಲ್ಲಿ ವಾಸವಿದ್ದ ಬಗ್ಗೆ ದಾಖಲೆಗಳು ಇರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಅಲ್ಲಿಗೆ ಹೋಗಿ ಬರುತ್ತಿದ್ದೆವು ಎಂದು ನುಡಿಯುತ್ತಾರೆ. ನಾವು ದಾವಾ ಆಸ್ತಿಗೆ ಸಂಬಂಧಿಸಿದಂತೆ ಕಂದಾಯ ಪಾವತಿ ಮಾಡುತ್ತಿದ್ದ ಬಗ್ಗೆ ದಾಖಲೆಗಳು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಕಂದಾಯ ಪಾವತಿ ಮಾಡಲು ಹಣವನ್ನು ನೀಡುತ್ತಿದ್ದೆವು ಎಂದು ನುಡಿಯುತ್ತಾರೆ. ನನ್ನ

ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ದಾವಾ ಆಸ್ತಿಯಲ್ಲಿ ಜಂಟಿಯಾಗಿ ವ್ಯವಸಾಯ ಮಾಡುತ್ತಿದ್ದೆವು ಮತ್ತು ಬಂದ ಫಸಲನ್ನು ಸಮವಾಗಿ ಹಂಚಿಕೊಳ್ಳುತ್ತಿದ್ದವು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ.

ನಮ್ಮ ತಂದೆಯವರು ಚಿಕ್ಕ ವಯಸ್ಸಿನಲ್ಲೇ ಸರ್ಕಾರಿ ಕೆಲಸಕ್ಕೆ ಸೇರಿದ ನಂತರ ಒಟ್ಟು ಕುಟುಂಬದಿಂದ ಹಣವನ್ನು ಪಡೆದುಕೊಂಡು ಬೇರೆಯಾಗಿದ್ದರು ಎಂದರೆ ಸರಿಯಲ್ಲ. ನಾನು, ನಮ್ಮ ತಂದೆ ಮತ್ತು ಸಹೋದರಿಯರು ಎಲ್ಲರೂ ದಾವೆಯ ಶಿರೋನಾಮೆಯಲ್ಲಿ ತೋರಿಸಿರುವ ವಿಳಾಸದಲ್ಲಿ ವಾಸವಿರುತ್ತೇವೆ ಎಂದರೆ ಸರಿ.

ಬೆಂಗಳೂರಿನ ಜೆ.ಪಿ ನಗರದಲ್ಲಿ ಇರುವ 3 ಹಂತಸ್ತಿನ ಮನೆ ನನ್ನ ಹೆಸರಿನಲ್ಲಿ ಇರುತ್ತದೆ. ಸದರಿ ಮನೆಯನ್ನು ಪ್ರಸ್ತುತ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಸ್ವಯಾರ್ಜಿತ ಆಸ್ತಿಯಾಗಿರುವ ಕಾರಣ ಅನ್ನು ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ.

1 ರಿಂದ 4ನೇ ಪ್ರತಿವಾದಿಗಳ ತಂದೆಯವರು ಜೀವನ ಪರ್ಯಂತ ಅರ್ಚಕರ ವೃತ್ತಿ ಮತ್ತು ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಮತ್ತು ನಾವು ವ್ಯವಸಾಯ ಮಾಡಿಕೊಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಅದನ್ನು ಎಲ್ಲರೂ ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇವೆ ಎಂದು ನುಡಿಯುತ್ತಾರೆ. 1 ರಿಂದ 4ನೇ ಪ್ರತಿವಾದಿ ಮತ್ತು ಅವರ ತಂದೆ

ಅರ್ಚಕರ ವೃತ್ತಿ ಮತ್ತು ವ್ಯವಸಾಯ ಮಾಡಿಕೊಂಡು ಬರುತ್ತಿದ್ದರಿಂದ ಅವರ ಹೆಸರಿನಲ್ಲಿ ಸರ್ಕಾರದಿಂದ ದಾವಾ ಐಟಂ-1 ರಿಂದ 3ನೇ ಸ್ವತ್ತುಗಳು ಮಂಜೂರಾಗಿರುತ್ತವೆ ಎಂದರೆ ಸರಿಯಲ್ಲ. ನಮ್ಮ ತಂದೆ ಎಂದಿಗೂ ದಾವಾ ಆಸ್ತಿಯಲ್ಲಿ ಭಾಗ ಇದೆ ಎಂದು ಹೇಳಿ ರೆವಿನ್ಯೂ ಇಲಾಖೆಯಲ್ಲಿ ಭಾಗ ಕೇಳಿ ದಾವೆ ಮಾಡಿರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಸಹ ರೆವಿನ್ಯೂ ಇಲಾಖೆಯಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ನಾವು ಒಟ್ಟು ಕುಟುಂಬದ ಸದಸ್ಯರಾಗಿಲ್ಲದೇ ಇರುವ ಕಾರಣ ಎಲ್ಲಿಯೂ ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ಮಲ್ಲಪ್ಪನ ಕುಟುಂಬದವರೇ ಅರ್ಚಕರ ವೃತ್ತಿ ಮಾಡುತ್ತಿರುವುದಿಲ್ಲ ಈಗಲೂ ಅವರೇ ಮುಂದುವರೆಸಿಕೊಂಡು ಬಂದಿರುತ್ತಿದ್ದಾರೆ ಎಂದರೆ ಸಾಕ್ಷಿ ಈ ಹಿಂದೆ ಅರ್ಚಕರ ವೃತ್ತಿಗೆ ಸಹಾಯ ಮಾಡುತ್ತಿದ್ದೆವು ಈಗ ಸಹಾಯ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ.

ಮಲ್ಲಪ್ಪನಿಗೆ ಮಂಜೂರಾದ ಆಸ್ತಿಗಳಲ್ಲಿ ಮಲ್ಲಪ್ಪನವರ ಮಕ್ಕಳು ವ್ಯವಸಾಯ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ ಎಂದರೆ ಸರಿ. ದಾವಾ ಐಟಂ-1 ರಿಂದ 3ರ ಸ್ವತ್ತುಗಳು ಮಲ್ಲಪ್ಪನ ಒಟ್ಟು ಕುಟುಂಬದ ಸ್ವತ್ತುಗಳಾಗಿರುತ್ತವೆ ವಿನಃ ನಮ್ಮ ಕುಟುಂಬಕ್ಕೆ ಸೇರಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ-4ರ ಮನೆ ಸ್ವತ್ತು ಮಲ್ಲಪ್ಪನವರಿಗೆ ಅವರ ತಾಯಿ ಕಡೆಯಿಂದ ಬಂದಿರುವ ಸ್ವತ್ತಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ

ಎಂದು ನುಡಿಯುತ್ತಾರೆ. ಮಲ್ಲಪ್ಪನವರೇ ಅವರ ತಾಯಿಯನ್ನು ನೋಡಿಕೊಂಡು ಬಂದಿದ್ದು, ಅವರ ಕೊನೆಯವರೆಗೂ ನೋಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನಾಗಲೀ ಅಥವಾ ನಮ್ಮ ತಂದೆಯಾಗಲೀ ಮಲ್ಲಪ್ಪನ ತಾಯಿಯ ಪಾಲನೆ ಪೋಷಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳು ದೇವಿರಮ್ಮನ ಹೆಸರಿನಲ್ಲಿ ಬರುತ್ತಿರುತ್ತವೆ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.